**C.C. No.2767/2022. PW1**

ದಿನಾಂಕ **14.12.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು

**<u>ಪಾಟೀ ಸವಾಲುಃ</u>- ಆರೋಪಿ ಪರ ಶ್ರೀ ಬಿ ಎಸ್ ಕೆ ವಕೀಲರಿಂದ ಃ-**

ನಾನು ದ್ವಿತೀಯ ಪಿ ಯುಸಿ ವಿದ್ಯಾಭ್ಯಾಸ ಮಾಡಿರುತ್ತೇನೆ ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಬ್ಯಾಂಕಿನ ವ್ಯವಹಾರದ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ, ಸ್ವಲ್ಪ ಮಾಹಿತಿ ಇದೆ. ನಾನೇ ನನ್ನ ವಕೀಲರಿಗೆ ಈ ರೀತಿ ದೂರು ಹಾಕಬೇಕು ಮತ್ತು ಇದೇ ರೀತಿ ನೋಟೀಸು ಕಳುಹಿಸಬೇಕೆಂದು ಮಾಹಿತಿ ನೀಡಿರುತ್ತೇನೆ. ನಾನು ನನ್ನ ದೂರಿನಲ್ಲ ತಿಳಿಸಿರುವ ವಿಳಾಸದಲ್ಲಿ ಖಾಯಂ ವಾಸಿಯಾಗಿದ್ದೇನೆ. ಆರೋಪಿಯನ್ನು ನಾನು ಮೈಸೂರಿನಲ್ಲಿ ನನ್ನ ಅಕ್ಕನ ಮನೆಗೆ ಹೋಗಿದ್ದಾಗ 2-3 ಬಾರಿ ನೋಡಿರುತ್ತೇನೆ, ಆರೋಪಿಯು ನನ್ನ ಅಕ್ಕಳ ಸಹ್ಯೋದ್ಯೋಗಿ. ನನ್ನ ಅಕ್ಕನ ಹೆಸರು ಮಂಗಳ.

ಆರೋಪಿಯು 2 – 3 ವರ್ಷಗಳಿಂದ ಪರಿಚಯ. ಆಟೋಪಿಯ ಕೌಟುಂಬಿಕ ಹಿನ್ನೆಲೆ ಗೊತ್ತಿಲ್ಲ. ಆರೋಪಿಯು ಯಾವ ದಿನಾಂಕ ನನ್ನ ಬಳಿ ಹಣ ಕೇಳಿರುತ್ತಾರೆ ಎಂದು ದಿನಾಂಕ ನೆನಪಿಲ್ಲ. ಆರೋಪಿ ಹಣ ಕೇಳುವಾಗ ನನ್ನ ಅಕ್ಕ ಮತ್ತು ನಾನು ಹಾಗೂ ಅವರು ಇದ್ದೇವು. ನಾವು 3 ಜನ ಹೊರತು ಬೇರೆ ಯಾರು ಇರಲಿಲ್ಲ. ದಿಃ22.02.2022 ರಂದು ಆರೋಪಿ ಮತ್ತು ನನ್ನ ಅಕ್ಕ ಆಡಿಗೆರೆಯಲ್ಲಿನ ನನ್ನ ಮನೆಗೆ ಬಂದಿದ್ದರು. ಆ ದಿನ ನಾನು ರೂ.9,50,000/- ಹಣ ಕೊಟ್ಟಿರುತ್ತೇನೆ. ನನ್ನ ತಂಗಿ ಮತ್ತು ಆರೋಪಿಯ ನಡುವೆ ಸಂಬಂಧ ಹೇಗೆ ಇದೆ ಎಂದು ನನಗೆ ಗೊತ್ತಿಲ್ಲ. ದಿಃ22.02.2022 ರಂದು ನನ್ನ ಬಳಿ ರೂ.9,50,000/- ಹಣ ನಗದು ರೂಪದಲ್ಲಿ ಇತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಯಾವುದೇ ಒಬ್ಬ ವ್ಯಕ್ತಿ ರೂ.2 ಲಕ್ಷಕ್ಕಿಂತ ಹೆಚ್ಚಿನ ವ್ಯವಹಾರ ಮಾಡಬೇಕಾದರೆ ನಗದು ಹಣದ ಮೂಲಕ ಮಾಡಬಾರದು ಎಂದು ನಿಯಮ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸಲಕರಣಗೆ ಹಣವನ್ನು ಕೆಲವೊಂದು ಕಡೆ ನಗಧು ರೂಪದಲ್ಲಿ ಮತ್ತು ಕೆಲವೊಂದು ಕಡೆಗೆ ಬ್ಯಾಂಕ್ ಮೂಲಕ ಕಳುಹಿಸಿರುತ್ತೇನೆ. ಯಾರು

ಯಾರಿಗೆ ನಗಧು ರೂಪದಲ್ಲಿ ಕಳುಹಿಸಿರುತ್ತೇನೆ, ಯಾರಿಗೆ ಬ್ಯಾಂಕ್ ವ್ಯಹಾರದ ಮೂಲಕ ಕಳುಹಿಸಿರುತ್ತೇನೆ ಎಂದು ಹೇಳಲಾಗುವುದಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. ನಾನು 2022 ನೇ ಸಾಲಿನಲ್ಲಿ ರೂ.9,50,000/- ಹಣವನ್ನು ಆದಾಯ ತೆರಿಗೆಯಲ್ಲಿ ತೋರಿಸಿರುವುದಿಲ್ಲ. ಆರೋಪಿಯು ಹಣ ಕೇಳಲು ನನ್ನ ಮನೆಯ ಬಳಿಗೆ ಬಂದಿದ್ದಾಗ ನಾನು, ನನ್ನ ಅಕ್ಕ, ಮತ್ತು ಆರೋಪಿ ಇದ್ದೆವು. ಆರೋಪಿಯು ಅವರು ಕೆಲಸ ಮಾಡುತ್ತಿದ್ದ ಶಾಲೆಯಲ್ಲಿ ಅವರಿಗೆ ಕೆಲಸ ಖಾಯಂ ಆಗುತ್ತೆ ಹಾಗಾಗಿ ಖರ್ಚಿಗೆ ಹಣ ಬೇಕು ಎಂದು ನನ್ನಿಂದ ಹಣ ಪಡೆದಿರುತ್ತಾರೆ. ಈ ವಿಚಾರವನ್ನು ನಾನು ನನ್ನ ದೂರಿನಲ್ಲಿ ಹೇಳಿಲ್ಲ. ನನಗೆ ಆರೋಪಿಯ ಕುಟುಂಬದ ಆರ್ಥಿಕ ಪರಿಸ್ಥಿತಿ ಬಗ್ಗೆ ಮಾಹಿತಿ ಇಲ್ಲ. ಆರೋಪಿಯ ತಂದೆ ಮತ್ತು ಗಂಡನ ಹೆಸರು ನನಗೆ ಗೊತ್ತಿಲ್ಲ. ಆರೋಪಿಯ ತಂದೆ ಪೊಲೀಸ್ ಉಪ ನಿರೀಕ್ಷಕರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಗಂಡ ಸಾಫ್ಟ್ ವೇರ್ ಉದ್ಯೋಗಿ ಎಂದರೆ ಇರಬಹುದು. ಅದೇ ರೀತಿ ಆರೋಪಿಯು ಅವರ ಶಾಲೆಯ ಮುಖ್ಯ ಶಿಕ್ಷಕಿ ಎಂದರೆ ಸರಿ. ಆರೋಪಿಯ ಕುಟುಂಬದ ಒಟ್ಟು ಮಾಸಿಕ ಆದಾಯ ರೂ.2 ಲಕ್ಷಕ್ಕಿಂತ ಹೆಚ್ಚು ಇದೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಅಕ್ಕ ಆರೋಪಿಯ ಶಾಲೆಯಲ್ಲಿ ಅತಿಥಿ ಶಿಕ್ಷಕಿ ವೃತ್ತಿ ಮಾಡುತ್ತಿದ್ದಾರೆ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ. ನಾನು ಆರೋಪಿಯಿಂದ ಯಾವುದೇ ಬರವಣಿಗೆ ಮಾಡಿಸಿಕೊಂಡಿಲ್ಲ ಚೆಕ್ ಅನ್ನು ಮಾತ್ರ ಪಡೆದಿರುತ್ತೇನೆ. ಚೆಕ್ ಪಡೆದಾಗ ನಾನು, ನನ್ನ ಅಕ್ಕ ಮತ್ತು ಆರೋಪಿ ಮಾತ್ರ ಇದ್ದೆವು. ನಿಪಿ 1 ಮತ್ತು 2 ಚೆಕ್ ಗಳಲ್ಲಿ ಸಹಿ ಒಂದು ಇಂಕ್ ನಲ್ಲಿ ಮತ್ತು ಚೆಕ್‌ನ ಉಳಿದ ವಿವರಗಳು ಬೇರೆ ಇಂಕ್ ನಲ್ಲಿ ಬೇರೆ ಬರವಣಿಗೆಯಲ್ಲಿ ಇದೆ ಎಂದರೆ ನನಗೆ ಗೊತ್ತಾಗುತ್ತಿಲ್ಲ. ಮೇಲ್ನೋಟಕ್ಕೆ ವ್ಯತ್ಯಾಸ ಕಂಡು ಬಂದರು ಸಹಃ ನಾನು ಉದ್ದೇಶಪೂರ್ಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ 3 ರಲ್ಲಿ 2 ಅಂಶಗಳು ಮಾತ್ರ ನನ್ನ ಖಾತೆಗೆ ಸಂಬಂಧಿಸಿದ್ದು, 3 ನೇ ಅಂಶದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಅಕ್ಕನನ್ನು ಕರೆದು ಸಾಕ್ಷ್ಯ ನುಡಿಸಲು ಯಾವುದೇ ತೊಂದರೆ

ನನಗೆ ಇಲ್ಲ. ನಾನು ನೀಡಿದ ನೋಟೀಸಿಗೆ ಆರೋಪಿ ಏನು ಉತ್ತರ ನೀಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

ಆರೋಪಿ ನೀಡಿದ ಚೆಕ್ ಗಳು insufficient funds ಎಂಬ ಹಿಂಬರಹದೊದಿಗೆ ವಾಪಾಸು ಬಂದಿರುತ್ತದೆ. ಆರೋಪಿ 2017 ರಲ್ಲಿ ಮೈಸೂರಿನ ವಿದ್ಯಾನಗರದಲ್ಲಿ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ 2017 ರಲ್ಲಿ ವಿದ್ಯಾನಗರದಿಂದ ಜ್ಯೋತಿ ನಗರಕ್ಕೆ ಮನೆ ಬದಲಾವಣೆ ಮಾಡುವಾಗ ಆರೋಪಿ ಸಹಿ ಮಾಡಿದ್ದ ಮತ್ತು ಆರೋಪಿಯ ಗಂಡ ಸಹಿ ಮಾಡಿದ್ದ ಕೆಲವು ಚೆಕ್ ಗಳು ಕಳೆದುಹೋಗಿದ್ದವು ಎಂದರೆ ಸರಿಯಲ್ಲ. ಈ ಸಂಬಂಧವಾಗಿ ಆರೋಪಿಯ ಗಂಡ ಮೈಸೂರಿನ ನಜಾರ್ಬಾದ್ ಪೊಲೀಸ್ ಠಾಣೆಗೆ ಚೆಕ್ ಮತ್ತು ಇತರ ದಾಖಲೆಗಳು ಕಳೆದುಹೋಗಿದೆ ದಿಃ19.11.2017 ರಂದು ದೂರು ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದೂರಿಗೆ ಸಂಬಂಧಿಸಿದಂತೆ ನಜರ್ಬಾದ್ ಪೊಲೀಸ್ ಠಾಣೆಯಲ್ಲಿ ಜಿ.ಪಿಟಿಷನ್ ನಂ.1033/2017 ಎಂದುಹಿಂಬರಹ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಅಕ್ಕ ಆರೋಪಿಯ ಮನೆಗೆ ಹೋಗಿ-ಬರುತ್ತಿದ್ದುದನ್ನು ಮಾಡುತ್ತಿದ್ದರಿಂದ ಸದರಿ ಚೆಕ್ ಗಳನ್ನು ತಂದು ನನ್ನ ಮೂಲಕ ಪ್ರಕರಣ ದಾಖಲು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಹೀಗೆ ಚೆಕ್ ಗಳು ಕಳೆದುಹೋಗಿದ್ದರಿಂದ ದಿಃ22.11.2017 ರಂದು ಆರೋಪಿಯು ಅವರ ಬ್ಯಾಂಕ್ ಗೆ ಹಣ ಪಾವತಿ ಸ್ಟಾಪ್ ಮಾಡಬೇಕೆಂದು ಅರ್ಜಿ ನೀಡಿದ್ದು ಅದು ಸ್ವೀಕೃತಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದಾಗಿ ನಾನು ನಗಧೀಕರಣಕ್ಕೆ ಹಾಜರುಪಡಿಸಿದ 2 ಚೆಕ್ ಗಳು payment stop by drawer ಎಂಬ ಹಿಂಬರದೊಂದಿಗೆ ವಾಪಾಸು ಬಂದಿದೆ ಎಂದರೆ ನನಗೆ ಗೊತ್ತಿಲ್ಲ.

ನನಗೆ ರೂ.9,50,000/- ಹಣವನ್ನು ಸಾಲವಾಗಿ ನೀಡುವ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಕುಟುಂಬ ಆರ್ಥಿಕವಾಗಿ ಸದೃಡವಾಗಿರುವುದರಿಂದ ನನ್ನ ಬಳಿ ಸಾಲ ಪಡೆಯುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ಕಾಣುತ್ತಿರುವ 3 ನೇ ಚೆಕ್ ನನ್ನ ಚೆಕ್ ಆಗಿದ್ದು, ಅದು ಕೇವಲ

10,000 ಇಲ್ಲ ಎಂದು ವಾಪಾಸು ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಅದು ನನ್ನ ಚೆಕ್ ಅಲ್ಲ. ಆರೋಪಿಯು ನನಗೆ ಖುದ್ದು ಪರಿಚಯವಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಖುದ್ದು ಪರಿಚಯ ನನಗೆ ಇಲ್ಲದ ಕಾರಣ ಅವರ ಕುಟುಂಬದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ಅಕ್ಕ ಷರಿಕ್ಕಾಗಿ ಅಕ್ರಮ ಲಾಭ ಪಡೆಯಲು ಆರೋಪಿ ವಿರುದ್ಧ ಸುಳ್ಳು ಕೇಸು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ನಡುವೆ ಯಾವುದೇ ಆರ್ಥಿಕ ವ್ಯವಹಾರವಾಗದ ಕಾರಣ ಯಾವುದೇ ಹಣ ನೀಡುವ ಬಾದ್ಯತೆ ಆರೋಪಿಗೆ ಇಲ್ಲ ಎಂದರೆ ಸರಿಯಲ್ಲ. ನಾನು ಹಣ ಕೊಡುವಾಗ ಬಡ್ಡಿ ಮಾತುಕತೆ ಆಗಿರುವುದಿಲ್ಲ. ಸಾಮಾನ್ಯವಾಗಿ 2-3 ಬಾರಿ ಬೇಟಿ ಮಾಡಿದರೆ ದೊಡ್ಡ ಮೊತ್ತದ ಹಣ ಯಾರು ಕೊಡುವುದಿಲ್ಲ ಎಂದರೆ ಸಾಕ್ಷಿಯು ಅವರು ಚೆಕ್ ನೀಡಿದ್ದರಿಂದ ನಾನು ಹಣ ಕೊಟ್ಟಿದ್ದೆ. ನಾನು ಈ ಚೆಕ್ ಪ್ರಕರಣ ಹಾಕಿದ ನಂತರ ಆರೋಪಿಯು ನನ್ನ ವಿರುದ್ಧ ಮೈಸೂರಿನ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಈ ದೂರಿನಲ್ಲಿ ತಿಳಿಸಿದಂತೆ ಯಾವುದೇ ಹಣ ನೀಡಲು ಬದ್ದರಲ್ಲ ಎಂದರೆ ಸರಿಯಲ್ಲ. ನಿಪಿ 3 ರಲ್ಲಿರುವ 3 ನೇ ಕಂಡಿಕೆಯು ನನ್ನ ಖಾತೆಗೆ ಸಂಬಂಧಪಟ್ಟಿಲ್ಲ ಎಂದು ರುಜುವಾತುಪಡಿಸಲು ಸದರಿ ಬ್ಯಾಂಕ್ ಮ್ಯಾನೇಜರಿಗೆ ಕರೆಸಿ ವಿಚಾರಣೆ ಮಾಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿಯು ನನಗೆ ಅವರನ್ನು ಕರೆಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆ</u> : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

ಸಹಿ/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.